# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **943** |
| ಉತ್ತರಿಸಬೇಕಾದ ದಿನಾಂಕ | : | 21.09.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಚಾಮರಾಜನಗರ, ಮೈಸೂರು, ಹಾಸನ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಕಳೆದ 3 ವರ್ಷಗಳಿಂದ ಯಾವ ಯಾವ ವಸತಿ ಯೋಜನೆಗಳಲ್ಲಿ ಎಷ್ಟು ಫಲಾನುಭವಿಗಳಿಗೆ ; ಎಷ್ಟು ಮನೆಗಳನ್ನು ಹಂಚಿಕೆ ಮಾಡಲಾಗಿದೆ ; (ಜಿಲ್ಲಾವಾರು ಪೂರ್ಣ ವಿವರ ನೀಡುವುದು) | ಚಾಮರಾಜನಗರ, ಮೈಸೂರು, ಹಾಸನ ಹಾಗೂ ಮಂಡ್ಯ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳಿಂದ ಅಂದರೆ 2019-20 ರಿಂದ 2021-22ರವರೆಗೆ ವಿವಿಧ ವಸತಿ 59721 ಮನೆಗಳನ್ನು ಹಂಚಿಕೆ ಮಾಡಲಾಗಿದ್ದು, ವಿವರ ಕೆಳಕಂಡಂತಿದೆ. |

| ಕ್ರ ಸಂ | ಯೋಜನೆ | 2019-20 | 2020-21 | 2021-22 | ಒಟ್ಟು |
|---|---|---|---|---|---|
| 1 | ಚಾಮರಾಜನಗರ | 1564 | 72 | 5748 | 7384 |
| 2 | ಹಾಸನ | 2479 | 698 | 12317 | 15494 |
| 3 | ಮಂಡ್ಯ | 3126 | 112 | 12121 | 15359 |
| 4 | ಮೈಸೂರು | 6352 | 1679 | 13453 | 21484 |
| | ಒಟ್ಟು | **13521** | **2561** | **43639** | **59721** |

ಜಿಲ್ಲಾವಾರು ಹಾಗೂ ಯೋಜನೆವಾರು ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಆಶ್ರಯ ಯೋಜನೆ ಹಾಗೂ ಇತರೆ ಯೋಜನೆಯಡಿ ಎಷ್ಟು ಫಲಾನುಭವಿಗಳಿಗೆ ನಿವೇಶನ ನೀಡಲಾಗಿದೆ ; | ಚಾಮರಾಜನಗರ, ಮೈಸೂರು, ಹಾಸನ ಹಾಗೂ ಮಂಡ್ಯ ಜಿಲ್ಲೆಗಳಲ್ಲಿ 2019-20 ರಿಂದ 2022-23 ರವರೆಗೆ ಮುಖ್ಯ ಮಂತ್ರಿಗಳ ಗ್ರಾಮೀಣ ನಿವೇಶನ ಹಾಗೂ ಮುಖ್ಯಮಂತ್ರಿಗಳ ನಗರ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳಿಗೆ 1231 ನಿವೇಶನಗಳನ್ನು ಹಂಚಿಕೆ ಮಾಡಲಾಗಿದ್ದು, ವಿವರ ಕೆಳಕಂಡಂತಿದೆ. |

| ಜಿಲ್ಲೆ | ಹಂಚಿಕೆ ಮಾಡಲಾದ ನಿವೇಶನಗಳು | | | | |
|---|---|---|---|---|---|
| | 2019-20 | 2020-21 | 2021-22 | 2022-23 | ಒಟ್ಟು |
| ಚಾಮರಾಜನಗರ | 0 | 0 | 0 | 173 | 173 |
| ಮೈಸೂರು | 74 | 23 | 127 | 95 | 319 |
| ಹಾಸನ | 12 | 0 | 47 | 0 | 59 |
| ಮಂಡ್ಯ | 30 | 366 | 272 | 12 | 680 |
| ಒಟ್ಟು | **116** | **389** | **446** | **280** | **1231** |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಸದರಿ ಯೋಜನೆಗಳಲ್ಲಿ ಹಂಚಿಕೆ ಮಾನದಂಡಗಳೇನು ; | ನಿವೇಶನ ರಹಿತರಿಗೆ ನಿವೇಶನಗಳನ್ನು ಹಂಚಿಕೆ ಮಾಡಲು ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ.<br>• ಅರ್ಜಿದಾರರು ಕಡ್ಡಾಯವಾಗಿ ಮಹಿಳೆಯಾಗಿರಬೇಕು (ವಿವಾಹಿತ ಅಥವಾ ಏಕ ಮಹಿಳಾ ಒಡೆತನದ ಗೃಹಿಣಿ). ಮಾಜಿ ಯೋಧರು, ವಿಧುರರು, ಅಂಗವಿಕಲರು ಮತ್ತು ಹಿರಿಯ ನಾಗರೀಕರಾಗಿದ್ದಲ್ಲಿ ಪುರುಷರು ಸಹಾ ಅರ್ಹರಾಗಿರುತ್ತಾರೆ. |

- ಫಲಾನುಭವಿಯು ಸಂಬಂಧಪಟ್ಟ ಗ್ರಾಮೀಣ/ನಗರ ಪ್ರದೇಶದಲ್ಲಿ ವಾಸವಾಗಿರಬೇಕು.
- ಅರ್ಜಿದಾರರ ಕುಟುಂಬವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದು, ವಾರ್ಷಿಕ ಆದಾಯವು ಗ್ರಾಮೀಣ ಪ್ರದೇಶವಾಗಿದ್ದಲ್ಲಿ ರೂ. 1,20,000/- ಕ್ಕಿಂತ ಕಡಿಮೆ ಇರಬೇಕು. ಹಾಗೂ ನಗರ ಪ್ರದೇಶವಾಗಿದ್ದಲ್ಲಿ ರೂ. 2,00,000/- ಕ್ಕಿಂತ ಕಡಿಮೆ ಇರಬೇಕು.
- ಅರ್ಜಿದಾರರ ಕುಟುಂಬವು ವಸತಿರಹಿತರಾಗಿದ್ದು, ಅರ್ಜಿದಾರರು ಅಥವಾ ಕುಟುಂಬದ ಯಾವುದೇ ಸದಸ್ಯರ ಹೆಸರಿನಲ್ಲಿ ಕರ್ನಾಟಕದ ಯಾವುದೇ ಭಾಗದಲ್ಲಿ ಸ್ವಂತ ಮನೆ ಅಥವಾ ನಿವೇಶನ ಹೊಂದಿರಬಾರದು.
- ಬೇರೆ ಯಾವುದೇ ಯೋಜನೆ/ ಇಲಾಖೆಯಿಂದ ಈಗಾಗಲೇ ವಸತಿ/ನಿವೇಶನ ಸೌಲಭ್ಯ ಪಡೆದಿರಬಾರದು.

ಈ) ಸದರಿ ನಿವೇಶನಗಳಲ್ಲಿ ಮನೆ, ಕಟ್ಟಿಕೊಳ್ಳಲು ಯಾವ ಯೋಜನೆಯಲ್ಲಿ ಎಷ್ಟು ಫಲಾನುಭವಿಗಳಿಗೆ ಧನಸಹಾಯ ಮಾಡಲಾಗಿದೆ ; (ಪೂರ್ಣ ವಿವರಗಳೊಡನೆ ಮಾಹಿತಿ ನೀಡುವುದು)

ಆಶ್ರಯ ನಿವೇಶನ ಯೋಜನೆಯಡಿ ಹಂಚಿಕೆ ಮಾಡಲಾದ ನಿವೇಶನಗಳಲ್ಲಿ ಫಲಾನುಭವಿಗಳು ತಮ್ಮ ಮನೆಯನ್ನು ಸ್ವತಃ ನಿರ್ಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ. ಒಂದುವೇಳೆ ಫಲಾನುಭವಿಯು ವಸತಿ ಯೋಜನೆಗಳಡಿ ವಸತಿ ಸೌಕರ್ಯವನ್ನು ಪಡೆಯಲು ಇಚ್ಛಿಸಿದಲ್ಲಿ ನಿಯಮಾನುಸಾರ ಗ್ರಾಮ ಸಭೆಯಲ್ಲಿ ಆಯ್ಕೆಗೊಳಿಸಿ ವಸತಿ ಸೌಕರ್ಯವನ್ನು ಕಲ್ಪಿಸಲಾಗುತ್ತಿದೆ.

ಉ) ಸದರಿ ಯೋಜನೆಗಳಲ್ಲಿ ಮನೆ ಕಟ್ಟಿಕೊಳ್ಳಲು ನೀಡುತ್ತಿರುವ ಪ್ರೋತ್ಸಾಹ ಧನದಿಂದ ಮನೆ ನಿರ್ಮಿಸಿಕೊಳ್ಳಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಊ) ಹಾಗಾದಲ್ಲಿ, ಯಾವ ಪ್ರಮಾಣದಲ್ಲಿ ಪರಿಷ್ಕರಿಸಲಾಗುವುದು ?

ಸರ್ಕಾರವು ವಸತಿರಹಿತರಿಗೆ ವಿವಿಧ ವಸತಿ ಯೋಜನೆಗಳಡಿ ಮನೆ ನಿರ್ಮಾಣ ಮಾಡಿಕೊಳ್ಳಲು ಸಹಾಯಧನವನ್ನು ಕೆಳಕಂಡಂತೆ ನೀಡಲಾಗುತ್ತಿದೆ.

| ಯೋಜನೆ | ವರ್ಗ | ಸಹಾಯಧನ (ರೂ.ಗಳಲ್ಲಿ) |
|---|---|---|
| ಬಸವ ವಸತಿ ಯೋಜನೆ | ಸಾಮಾನ್ಯ | 1,20,000/- |
| ಡಾ.ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ)* | ಪ.ಜಾ/ ಪಂಗಡ | * 2,00,000/- |
| ಪ್ರಧಾನ ಮಂತ್ರಿ ಅವಾಸ್ ಯೋಜನೆ (ಗ್ರಾಮೀಣ) | ಸಾಮಾನ್ಯ<br>ಪ.ಜಾ/ ಪಂಗಡ | 1,20,000/-<br>** 1,75,000/- |
| ದೇವರಾಜು ಅರಸು ವಸತಿ ಯೋಜನೆ | ಸಾಮಾನ್ಯ | 1.20,000/- |
| | ಪ.ಜಾತಿ/ ಪಂಗಡ (ಗ್ರಾಮೀಣ) | *** 1,75,000/- |
| | ಪ.ಜಾತಿ/ ಪಂಗಡ (ನಗರ) | 1,50,000 |
| ವಾಜಪೇಯಿ ನಗರ ವಸತಿ ಯೋಜನೆ | ಸಾಮಾನ್ಯ | 1,20,000/- |
| ಡಾ.ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ(ನಗರ) | ಪ.ಜಾ/ ಪಂಗಡ | 2,00,000/- |
| ಪ್ರಧಾನ ಮಂತ್ರಿ ಅವಾಸ್ ಯೋಜನೆ(ನಗರ) | ಸಾಮಾನ್ಯ/ ಪ.ಜಾ/ ಪಂಗಡ | 1,50,000/- |

* ಡಾ: ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆಯಡಿ 2022-23 ನೇ ಸಾಲಿನಿಂದ ಅನ್ವಯಿಸುವಂತೆ ಪರಿಶಿಷ್ಟ ಜಾತಿ ಮತ್ತು ಪ.ಪಂಗಡದ ಫಲಾನುಭವಿಗಳಿಗೆ ಸಹಾಯಧನವನ್ನು ರೂ.1.75 ಲಕ್ಷದಿಂದ 2.00 ಲಕ್ಷಕ್ಕೆ ಹೆಚ್ಚಿಸಿ, ಆದೇಶ ಹೊರಡಿಸಲಾಗಿದೆ.

** ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾಮೀಣ)ರಡಿ 2022-23 ನೇ ಸಾಲಿನಿಂದ ಅನ್ವಯಿಸುವಂತೆ ಪರಿಶಿಷ್ಟ ಜಾತಿ ಮತ್ತು ಪ.ಪಂಗಡದ ಫಲಾನುಭವಿಗಳಿಗೆ ಸಹಾಯಧನವನ್ನು ರೂ.1.50 ಲಕ್ಷದಿಂದ 1.75

| | | |
|---|---|---|
| | | ಲಕ್ಷಕ್ಕೆ ಹೆಚ್ಚಿಸಿ, ಆದೇಶ ಹೊರಡಿಸಲಾಗಿದೆ.<br><br>*** ದೇವರಾಜು ಅರಸು ವಸತಿ ಯೋಜನೆ(ಗ್ರಾಮೀಣ)ರಡಿ 2022-23 ನೇ ಸಾಲಿನಿಂದ ಅನ್ವಯಿಸುವಂತೆ ಪರಿಶಿಷ್ಟ ಜಾತಿ ಮತ್ತು ಪ.ಪಂಗಡದ ಫಲಾನುಭವಿಗಳಿಗೆ ಸಹಾಯಧನವನ್ನು ರೂ.1.50 ಲಕ್ಷದಿಂದ 1.75 ಲಕ್ಷಕ್ಕೆ ಹೆಚ್ಚಿಸಿ, ಆದೇಶ ಹೊರಡಿಸಲಾಗಿದೆ.<br><br>ಇದರೊಂದಿಗೆ ಫಲಾನುಭವಿಯು ಸಹಾಯಧನದ ನಾಲ್ಕು ಪಟ್ಟು ವಂತಿಕೆ ಹಣ ಭರಿಸಿ ಅಥವಾ ಬ್ಯಾಂಕ್ ಸಾಲ ಸೌಲಭ್ಯವನ್ನು ಪಡೆದು ಮನೆ ನಿರ್ಮಿಸಲು ಅವಕಾಶ ಕಲ್ಪಿಸಲಾಗಿದೆ. ನಗರ ಪ್ರದೇಶದಲ್ಲಿ ಪ್ರಧಾನ ಮಂತ್ರಿ ಆವಾಸ್ (ನಗರ) ಯೋಜನೆಯಡಿ ರೂ.1.50 ಲಕ್ಷ ಸಹಾಯಧನವನ್ನು ಸಂಯೋಜಿಸಿ, ಅನುಷ್ಠಾನಗೊಳಿಸಲಾಗುತ್ತಿದೆ. ಇದರೊಂದಿಗೆ ಫಲಾನುಭವಿಯು ಬ್ಯಾಂಕ್ ಸಾಲ ಸೌಲಭ್ಯವನ್ನು ಪಡೆಯಲು ಅವಕಾಶವಿರುತ್ತದೆ. |

ಸಂಖ್ಯೆ :ವಇ407 ಹೆಚ್‌ಎಎಂ 2022

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು